# 6

# “ಪರಲೋಕದಲ್ಲಿರುವಾತನು”

“ಅಕಾಶವು ನನಗೆ ಸಿಂಹಾಸನ, ಭೂಮಿಯು ನನಗೆ ಪಾದ ಪೀಠ” (ಯೆಶಾಯ 66:1) ಎಂಬುದು ದೇವರ ಪ್ರಕಟನೆ. ಈಗ ನಮಗಿರುವ ವಾಸಸ್ಥಳವು ಕೇವಲ ದೇವರ ಪಾದಪೀಠವಾಗಿದೆ. ಹಾಗೂ ಆತನ ದೃಷ್ಟಿಯಲ್ಲಿ ನಾವು ಸಣ್ಣ ಮಿಡಿತೆಗಳಿದ್ದಂತೆ ಇರುವೆವು (ಯೆಶಾಯ 40:22). ಸಹಜವಾದ, ಸಾಮಾನ್ಯವಾಗಿರುವ ಮನುಷ್ಯನು ದೇವರ ಆಳವಾದ ಸಂಗತಿಗಳನ್ನು ತಿಳಿದಿರುವದಿಲ್ಲ (1 ಕೊರಿಂಥ 2:10, 14)ಣಿ “ಪರಲೋಕದಲ್ಲಿರುವ ನಮ್ಮ ತಂದೆಯೇ” (ಮತ್ತಾಯ 6:9) ಎಂದು ಯೇಸು ಹೇಳಿದಾಗ ಆತನ ಅರ್ಥವೆಲ್ಲವನ್ನೂ ನಾವು ತಿಳಿಯಲಾರೆವು. ಯಾವುದಿದೆ ಮತ್ತು ಮುಂದೆ ಯಾವುದು ಇರುವುದು ಎಂಬುದರ ಬಗ್ಗೆ ಹೆಚ್ಚಾದದ್ದು ನಮಗೆ ತಿಳಿಸಲ್ಪಟ್ಟಿರುವದಿಲ್ಲ (1 ಯೋಹಾನ 3:2).

ಹಾಗಿದ್ದರೂ, ಪ್ರೇರಿತ ಜನರ ಮುಖಾಂತರವಾಗಿ ದೇವರ ಸಂಗತಿಗಳಲ್ಲಿ ಕೆಲವನ್ನು ಆತನು ನಮಗೆ ಪ್ರಕಟಿಸಿದ್ದಾನೆ. ಅದರ ಪರಿಣಾಮವಾಗಿ, ಪರಿಶುದ್ಧ ಬರಹಗಳ ಬೋಧನೆಗಳ ಮುಖಾಂತರ (ದೇವರಿಂದ ಉಸಿರಲ್ಪಟ್ಟ) ನಾವು ಸಂಪೂರ್ಣವಾಗಿ ವಿಶ್ವದ ಬಗ್ಗೆ ಅಜ್ಞಾನಿಗಳಾಗಿರುವ ಅವಶ್ಯಕತೆಯಿರುವದಿಲ್ಲ (ಇಬ್ರಿಯ 6:5), ದೇವರಿರುವ ಪರಲೋಕದ ಬಗ್ಗೆ ಕೆಲವೊಂದು ಜ್ಞಾನವು ಕೊಡಲ್ಪಡುವದರಿಂದ ಬರಲಿಕ್ಕಿದ್ದ ಜಗತ್ತಿನ ಶಕ್ತಿಯ ಪ್ರಭಾವವನ್ನು ರುಚಿಸಬಹುದು.

## ವಿವಿಧ ಆಕಾಶ ಮಂಡಳಗಳು

ವಿವಿಧ ಆಕಾಶ ಮಂಡಲಗಳಿರುವದರ ಬಗ್ಗೆ ಬೈಬಲ್ ಮಾತಾಡುತ್ತದೆ, ಆದರೆ “ಏಳು ಆಕಾಶಗಳಿರುವದರ” ವಿವರವು ಮಾನವ ಸಾಹಿತ್ಯದಲ್ಲಿ ಉದಯವಾಗಿದೆ. ಪರಿಶುದ್ಧ ಬರಹದಲ್ಲಿ ವಿವರಿಸಲ್ಪಟ್ಟ ಆಕಾಶಮಂಡಲಗಳಲ್ಲಿ ಒಂದು, ಪಕ್ಷಿಗಳು ಹಾರಾಡುವ ಸ್ಥಳವಾಗಿದೆ: “ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ” (ಆದಿಕಾಂಡ 1:20). ಪಕ್ಷಿಗಳ ಮತ್ತು ಮೋಡಗಳ ಹಾಗೂ ಗಾಳಿಯ ಆಕಾಶಮಂಡಲವನ್ನು ದಾಟಿ ಅಗಣಿತ ನಕ್ಷತ್ರಗಳ, ಸೂರ್ಯ, ಚಂದ್ರ ಮತ್ತು ಗ್ರಹಗಳ ವಾಸಸ್ಥಾನವಿದೆ. ಆ ಕ್ಷೇತ್ರವೂ ಸಹ ಪರಿಶುದ್ಧ ಬರಹಗಳಲ್ಲಿ ಆಕಾಶ ಮಂಡಲಿಯೆಂದು ಕರೆಯಲ್ಪಟ್ಟಿದೆ: “ಆಕಾಶ ಮಂಡಲದಲ್ಲಿ ಬೆಳಕುಗಳು ಉಂಟಾಗಲಿ” (ಆದಿಕಾಂಡ 1:14).

ಪಕ್ಷಿ ಆಕಾಶಮಂಡಲವು ಪ್ರಥಮ ಆಕಾಶಮಂಡಲ ಹಾಗೂ ನಕ್ಷತ್ರಗಳ ಸ್ಥಳವು ಎರಡನೆಯ ಆಕಾಶಮಂಡಲ ಎಂದು ಕರೆಯಲ್ಪಡಬಹುದೋ ಎಂಬುದು ನನಗೆ ತಿಳಿದಿರುವದಿಲ್ಲ. ಹಾಗಿದ್ದರೂ ಪರದೈಸ ಎಂದು ಕರೆಯಲ್ಪಡುವ ಮೂರನೆಯ ಆಕಾಶ ಮಂಡಲದ ಬಗ್ಗೆ ದೇವರು ನಮ್ಮನ್ನು ಅಜ್ಞಾನಿಗಳನ್ನಾಗಿ ಬಿಟ್ಟಿರುವದಿಲ್ಲ, ಆ ಸ್ಥಳದೊಳಗೆ ಪೌಲನಂತೆ (2 ಕೊರಿಂಥ 12:2, 4) ಯೇಸುವೂ ಶಿಲುಬೆಯ ಮೇಲಿದ್ದ ಕಳ್ಳನೂ ಹೋದರು (ಲೂಕ 23:43). ಮೂರನೆಯ ಆಕಾಶಮಂಡಲದೊಳಗಿಂದ ಪೌಲನು ಮತ್ತು ಯೇಸುವು ಈ ಭೂಲೋಕಕ್ಕೆ ಹಿಂದಿರುಗಿ ಬಂದರು. ಅವರು ಪರಲೋಕಕ್ಕೆ ಹೋಗಿದ್ದರೂ ತಂದೆಯು ವಾಸಿಸುವಲ್ಲಿಗೆ ಹೋಗಿರಲಿಲ್ಲ: ಯಾಕಂದರೆ ಯೇಸು

ಮೂರನೆಯ ಆಕಾಶಮಂಡಲವನ್ನು ಸಂದರ್ಶಿಸಿದ ನಂತರ, "ನಾನು ಇನ್ನೂ ತಂದೆಯ ಬಳಿಗೆ ಏರಿ ಹೋದವನಲ್ಲ" (ಯೋಹಾನ 20:17) ಎಂದು ಹೇಳಿದನು.

## ದೇವರ ಪರಲೋಕದ ಅಸ್ತಿತ್ವ

ಖಗೋಳ ಶಾಸ್ತ್ರಗಳು ದೇವರ ಸಿಂಹಾಸನದ ಪರಲೋಕವನ್ನು ಕಂಡುಕೊಳ್ಳಲು ಶಕ್ತರಾಗಲಿಲ್ಲದ್ದು, ಅದು ಕೇವಲ ಕಲ್ಪನೆಯಾಗಿರುವುದೆಂದು ತೋರಿಸುತ್ತದೆ ಎಂದು ಧರ್ಮನಿಂದಕರು ದ್ವೇಷ ಸಾಧಿಸುತ್ತಾರೆ. ಅದೇ ಭ್ರಮೆಯಿಂದ, ಜೀವವನ್ನು ನಿರ್ದಿಷ್ಟವಾಗಿ ಕಂಡು ಹಿಡಿಯಲಾಗದ್ದರಿಂದ ಇಲ್ಲವೇ "ನಿರೂಪಿಸಲು" ಆಗದ್ದರಿಂದ ಯಾವ ಜೀವವೂ ಅಸ್ತಿತ್ವದಲ್ಲಿರುವದಿಲ್ಲವೆಂದು ಸಿದ್ಧಪಡಿಸಿ ತೋರಿಸಬಹುದುಣಿ ಮಿತಿಯಿಲ್ಲದಾತನ ನಿವಾಸವನ್ನು ಕಂಡುಕೊಳ್ಳದಿದ್ದ ಮಿತಿಯುಳ್ಳ ಟೆಲೆಸ್ಕೋಪಿನ ಕಾರಣದಿಂದ ಪರಲೋಕದ ಅಸ್ತಿತ್ವದ ಬಗ್ಗೆ ಸಂಶಯ ಪಡಬಹುದೋ? ಭೌತಿಕ ಲೆನ್ಸುಗಳು, ಭೌತಿಕವಲ್ಲದ ಪರಲೋಕವು ಅವುಗಳಿಗೆ ಎಟಕುವ ರೀತಿಯಲ್ಲಿದ್ದರೂ, ಅದನ್ನು ದೃಷ್ಟಿಸಲಾರವು. "ದೇವರು ಆತ್ಮ ಸ್ವರೂಪನು" (ಯೋಹಾನ 4:24)ಣಿ "ಆತ್ಮಕ್ಕೆ ಮಾಂಸ, ಎಲುಬುಗಳು ಇರುವದಿಲ್ಲ" (ಲೂಕ 24:39), ಆದರೆ ಅದು "ಅದೃಶ್ಯ"ವಾದದ್ದಾಗಿದೆ (ಕೊಲೊಸ್ಸೆ 1:15).

ಇದಲ್ಲದೆ, ಮಾನವರಾದ ನಾವು ಖಗೋಳಶಾಸ್ತ್ರಗಳ ಸತತವಾದ, ವಿಶಾಲವಾದ, ಇನ್ನೂ ವಿಶಾಲವಾದ ಸಂಶೋಧನೆಗಳಿಂದ ಆಶ್ಚರ್ಯಪಡುವಂತೆ, ಧರ್ಮನಿಂದಕರು, "ನಾವು ಮೌನವಾಗಿರುವೆವು, ಯಾಕಂದರೆ ಟೆಲೆಸ್ಕೋಪ್‌ಗಳನ್ನು ದಾಟಿ ಏನಿರುವುದು, ಎಲ್ಲಾ ಭೌತಿಕ ಅಂತರಿಕ್ಷವನ್ನು ದಾಟಿ ಏನಿರುವುದು ಎಂಬುದನ್ನು ನಾವು ತಿಳಿದಿರುವದಿಲ್ಲ" ಎಂದು ಹೇಳುವಷ್ಟು ದೀನರಾಗಿರಬೇಕು. ಧರ್ಮನಿಂದಕರು ಉನ್ನತ ಮನಸ್ಸಿನಾಗಿರುವೆವು ಎಂದು ಹೇಳಿಕೊಳ್ಳದೆ ಅಥವಾ ತಮ್ಮ ಸ್ವಂತ ಕಲ್ಪನೆಗಳಿಂದ ನಡಿಸಲ್ಪಡದೆ, ಯೋಬನ ಆತ್ಮದಂತೆ ಅವರ ಆತ್ಮಗಳು ಮುರಿಯಲ್ಪಡಲಿ. "ನಾನು ತಿಳಿಯದ ಸಂಗತಿಗಳನ್ನೂ ನನಗೆ ಗೊತ್ತಿಲ್ಲದೆ ಬುದ್ಧಿಗೆ ಮೀರಿರುವ ಅದ್ಭುತಗಳನ್ನೂ ಕುರಿತು ಮಾತಾಡಿದ್ದೇನೆ. ... ಆದಕಾರಣ ನಾನು ಆಡಿದ್ದನ್ನು ತಿರಸ್ಕರಿಸಿ ಧೂಳಿಯಲ್ಲಿಯೂ ಬೂದಿಯಲ್ಲಿಯೂ ಕುಳಿತು ಪಶ್ಚಾತ್ತಾಪಪಡುತ್ತೇನೆ" (ಯೋಬ 42:3ಬಿ-6).

ಪರಲೋಕವು ಅಸ್ತಿತ್ವದಲ್ಲಿರುವದಿಲ್ಲ ಎಂದು ಪ್ರತಿಪಾದಿಸುವುದು ನಮ್ಮ ವಿಶ್ವದ ಪೂರ್ಣ ತಿಳುವಳಿಕೆಯನ್ನು ಊಹಿಸುತ್ತದೆ. ಅಷ್ಟೇ ಅಲ್ಲ, ಆದರೆ ನಮ್ಮ ಅಸ್ತಿತ್ವದ ಪರಿಧಿಯನ್ನು ದಾಟಿ ಏನಿದೆ ಎಂಬುದರ ಬಗೆಗೂ ಊಹಿಸುತ್ತದೆ. ಅಂಥ ಪ್ರತಿಪಾದನೆಯು ಸರ್ವ ಜ್ಞಾನವನ್ನು ಊಹಿಸುತ್ತದೆ. ಪರಲೋಕದ ಅಸ್ತಿತ್ವವನ್ನು ಅಲ್ಲಗಳೆಯಲು ಶಕ್ತನಾಗ ಬೇಕಾದರೆ ಅವನು ಎಲ್ಲವನ್ನೂ ತಿಳಿದವನಾಗಿರ ಬೇಕು. ಯಾಕಂದರೆ ಮನುಷ್ಯನು ತಿಳಿಯದೇ ಇದ್ದ ಒಂದೇ ಒಂದು ಸಂಗತಿ ಎಂದರೆ, ಅದು ಪರಲೋಕವೂ ಅಸ್ತಿತ್ವದಲ್ಲಿದೆ ಎಂಬುದು. ಹೀಗಿದ್ದರೂ ಪರಲೋಕದ ವಾಸ್ತವಿಕತೆಗಳನ್ನು ಅಲ್ಲಗಳೆಯ ಬೇಕಾದರೆ ಅವನು ಸರ್ವ ವ್ಯಾಪಿಯಾಗಿರಬೇಕು, ಯಾಕಂದರೆ ಮನುಷ್ಯನು ಹೋಗದೇ ಇರುವ ಒಂದು ಸ್ಥಳವಿದೆ. ಅಲ್ಲಿ ಪರಲೋಕವಿರಬಹುದು. ಧರ್ಮವಿರೋಧಿಗಳ ಪ್ರತಿಪಾದನೆಯ ಬದಲು ಹೆಚ್ಚು ಸಂತೋಷಗೊಳಿಸುವಂಥ, ಹೆಚ್ಚು ಯೋಗ್ಯವಾದಂಥ ಮನೋಭಾವನೆಯು ದಾವೀದನದಾಗಿದೆ:

> ಯೆಹೋವನೇ, ನನ್ನ ಎದೆಯಲ್ಲಿ ಹಮ್ಮಿಲ್ಲ, ನನಗೆ ಸೊಕ್ಕಿನ ಕಣ್ಣಿಲ್ಲಣಿ
> ಅಸಾಧ್ಯ ಕಾರ್ಯಗಳಲ್ಲಿಯೂ ದೊಡ್ಡ ವಿಷಯಗಳಲ್ಲಿಯೂ ಕೈಹಾಕುವದಿಲ್ಲ,

ನಿಜವಾಗಿ ನನ್ನ ಮನಸ್ಸನ್ನು ಸಮಾಧಾನಪಡಿಸಿದ್ದೇನೆಣಿ
ತಾಯಿಯ ಬಳಿಯಲ್ಲಿರುವ ಮೊಲೆಬಿಡಿಸಿದ ಕೂಸಿನಂತೆ ನೆಮ್ಮದಿಯಿಂದಿದೆ.
ನನ್ನಲ್ಲಿ ನನ್ನ ಮನಸ್ಸು ಮೊಲೆಬಿಡಿಸಿದ ಕೂಸಿನಂತಿದೆ
(ಕೀರ್ತನೆ 131:1, 2).

ಯೇಸು "ಮೇಲೆ" (ಅಪೊಸ್ತಲರ ಕೃತ್ಯ 1:9) ಪರಲೋಕಕ್ಕೆ ಹೋದನು ಎಂದು ಅವಿಶ್ವಾಸಿಗಳು ಹೇಳುವುದರ ಬಗ್ಗೆ ಹೀಗಿರುವುದೆಂದು ಹೇಳುತ್ತಾರೆ, ಹನ್ನೆರಡು ತಾಸುಗಳ ನಂತರ (ಭೂಮಿಯು ತಿರುಗುತ್ತಿರುವದರ ಕಾರಣ) ಪರಲೋಕವು "ಕೆಳಗೆ" ಇರುತ್ತದೆಂದು ಪ್ರತಿಪಾದಿಸಿದರು. ಹೀಗೆ ಅವರು ಯೇಸುವಿನ ಕಡೆಗೆ, ಬೈಬಲಿನ ಕಡೆಗೆ ಅಪಹಾಸ್ಯ ಮಾಡುವರು. ದೇವರ ವಾಸಸ್ಥಾನವು ಪ್ರಾಕೃತವಾದದ್ದಾಗಿದ್ದರೆ ಒಂದೇ ಸಮಯದಲ್ಲಿ ಪರಲೋಕವು ನಮ್ಮ ವಿಶ್ವದ ಎಲ್ಲಾ ದಿಕ್ಕುಗಳಲ್ಲಿ ನಮ್ಮನ್ನು ಸಂಪೂರ್ಣವಾಗಿ ಸುತ್ತುವರಿದು ಇರುತ್ತಿತ್ತು. ತನ್ನ ಸ್ನೇಹಿತರನ್ನು ತಂದೆಯ ಮನೆಗೆ ತೆಗೆದು ಕೊಂಡು ಹೋಗುತ್ತಿದ್ದೇನೆಂದು ಆತನು ವಾಗ್ದಾನ ಮಾಡುತ್ತಿದ್ದಾಗ ನಿಜವಾಗಿಯೂ ಒಳ್ಳೆಯವನೂ, ವಿಶ್ವವ್ಯಾಪಿಯಾಗಿ ಯುಗಗಳ ಬುದ್ಧಿವಂತ ಮನುಷ್ಯನೆಂದು ಸ್ವೀಕರಿಸಲ್ಪಟ್ಟಾತನೂ ಆದ ಒಬ್ಬನಲ್ಲಿ ನಂಬಿಕೆಯೊಂದಿಗೆ, ಮಹಾಬೋಧಕನ ಪಾದಗಳ ಬಳಿಯಲ್ಲಿ ಕುಳಿತುಕೊಳ್ಳು ವುದು ಹೆಚ್ಚು ಅರ್ಥವುಳ್ಳದ್ದಾಗುತ್ತಲಿದೆ.

## ದೇವರ ಪರಲೋಕ

ತಂದೆಯಿರುವಲ್ಲಿ ಪರಲೋಕವಿರುವುದು. ಅಲ್ಲಿಗೆ "ಯಾರೂ ಏರಿ ಹೋಗಿ ರುವದಿಲ್ಲ" (ಯೋಹಾನ 3:13) - ಪರಲೋಕದಿಂದ ಇಳಿದು ಬಂದು ಹಾಗೂ ತಂದೆಯ ಬಲಗಡೆಯಲ್ಲಿ ಕುಳಿತುಕೊಳ್ಳಲು ಹಿಂದಿರುಗಿ ಹೋದ ಯೇಸುವನ್ನು ಬಿಟ್ಟು ಬೇರೆಯಾರೂ ಹೋಗಿರುವದಿಲ್ಲ. ದೇವರು ವಾಸಿಸುವ ಸ್ಥಳವನ್ನು ಸೊಲೊಮೋನನು "ಉನ್ನತೋನ್ನತ - ಆಕಾಶ" ಎಂದು ಕರೆದಿದ್ದಾನೆ (1 ಅರಸು 8:27). ಪ್ರವಾದಿಯಾದ ಯೆಶಾಯನು ಮತ್ತು ಅಪೊಸ್ತಲ ಯೋಹಾನನು ಆ ಮಹಿಮೆಯುಳ್ಳ ಸ್ಥಳದ ಬಳಿಗೆ ನೋಡುವ ಭಾಗ್ಯ ಹೊಂದಿದರು. ನೀನು ಮತ್ತು ನಾನು ಅಲ್ಲಿ ಎಂದೆಂದಿಗೂ ವಾಸಿಸಲು ಅಪ್ಪಣೆ ಹೊಂದಿ ರುವೆವು. ಗೋಮೇಧಕ ಮತ್ತು ಸೂರ್ಯಕಾಂತ ಮಣಿಗಳಂತೆ ಉನ್ನತದಲ್ಲಿ ಎತ್ತರದಲ್ಲಿ ಸಿಂಹಾಸನಾಸೀನನಾಗಿರುವ ಕರ್ತನು ಕುಳಿತಿರುವನು. ಆತನ ತಲೆಯ ಮೇಲೆ ಪಚ್ಚೆ - ಮಣಿಯಂತೆ ಮಳೆಬಿಲ್ಲು ಇರುವುದು. ಹತ್ತು ಸಾವಿರ ದೇವದೂತರು ಹತ್ತು ಸಾವಿರ ಸಲ ಆತನ ಸ್ತೋತ್ರಮಾಡುವರು, ಸೆರಾಫೀಯರು - ತಮ್ಮ ಕಣ್ಣುಗಳನ್ನು ಮತ್ತು ಪಾದಗಳನ್ನು ಮುಚ್ಚುವದರೊಂದಿಗೆ, ಸಿಂಹಾಸನದ ಮೇಲೆ, "ಸೈನ್ಯಗಳ ಅಧಿಪತಿಯಾದ ಯೆಹೋ ವನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನುಣಿ ಭೂಮಂಡಲವೆಲ್ಲ ಆತನ ಪ್ರಭಾವದಿಂದ ತುಂಬಿದೆ" (ಯೆಶಾಯ 6:3ಣಿ ASV) ಎಂದು ಹೇಳುತ್ತಿರುವರು.

ಭೂಲೋಕದಲ್ಲಿದ್ದಾಗ, ಯೇಸುವು ದೇವರ ಪರಲೋಕದಲ್ಲಿ ಜೀವಿಸಿದ್ದನ್ನು ಜ್ಞಾಪಿಸಿಕೊಂಡನು ಮತ್ತು ಹಿಂದಿರುಗಿ ಹೋಗಲು ಹಂಬಲಿಸಿದನು: "ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆ ಪಡಿಸುಣಿ ಲೋಕ ಉಂಟಾಗುವದಕ್ಕಿಂತ - ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆ ಪಡಿಸು" (ಯೋಹಾನ 17:5).

ಅತ್ಯುನ್ನತ ಪರಲೋಕದಂಥ ಅತಿಶ್ರೇಷ್ಠವಾದ ಮಹಿಮೆಯುಳ್ಳ ಸ್ಥಳವು ಇದ್ದರೆ ಮನುಷ್ಯನ

ಮತ್ತು ದೇವದೂತರ ಮೇಲಿನ ಎಲ್ಲಾ ಅಧಿಕಾರವು ಅಲ್ಲಿ ಕೇಂದ್ರೀಕೃತವಾಗಿರುವುದು. ಅಲ್ಲಿಯ ಮತ್ತು ಭೂಲೋಕದಲ್ಲಿಯ ಪ್ರತಿಯೊಂದು ಕಿವಿಯು, ಮಹಾವೈಭವದಲ್ಲಿ ತನ್ನ ಸಿಂಹಾಸನದ ಮೇಲೆ ಕುಳಿತಿರುವಾತನನ್ನು ಕೇಳುತ್ತಿರಬೇಕು. "ಯೆಹೋವನೋ ತನ್ನ ಪರಿಶುದ್ಧ ಮಂದಿರದಲ್ಲಿದ್ದಾನೆಣಿಭೂಲೋಕವೆಲ್ಲಾಆತನಮುಂದೆಮೌನವಾಗಿರಲಿ"(ಹಬಕ್ಕೂಕ2:20ಣಿ ASV).

ಆದುದರಿಂದ, ಮಾನವರು ಕೂಟಗಳಲ್ಲಿ ಕುಳಿತುಕೊಂಡು ವಿವಾಹವಿಚ್ಛೇದನ, ಮದ್ಯಪಾನ, ಬಾಪ್ತಿಸ್ಮ, ನರ್ತನ ಇಲ್ಲವೇ ಯಾವುದೇ ಇತರ ಯಾವುದೇ ವಿಷಯದಲ್ಲಿ ಮತ ಚಲಾಯಿಸುವ ಹಕ್ಕು ಇರುವದಿಲ್ಲ. "ಮನುಷ್ಯನು ನಡೆದಾಡುತ್ತ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನು ಇಡಲಾರನು" (ಯೆರೆಮೀಯ 10:23ಬಿ), ಯಾಕಂದರೆ ಅವನು ಮರಣಹೊಂದುವ ಪಾಪಿಯಾಗಿದ್ದು ಅವನ ಮಾರ್ಗವು ಅವನಲ್ಲಿ ಇರುವುದಿಲ್ಲ. ಕೌನ್ಸಿಲುಗಳು ತಮ್ಮ ಸ್ವಂತ ಬಲಹೀನತೆ ಹಾಗೂ ಪಾಪಗಳಿಗಿಂತ ಮೇಲಕ್ಕೆ ಏರದವುಗಳು ಆಗಿರುವದರಿಂದ ಒಬ್ಬ ಮನುಷ್ಯನು ದೇವರ ಆಲಯದಲ್ಲಿ ಕುಳಿತುಕೊಂಡು ದೇವರಂತೆ - ಮಾತನಾಡಲಾರನು. ಯಾವುದೇ ಮನುಷ್ಯ ಇಲ್ಲವೇ ಜನರ ಯಾವುದೇ ಗುಂಪು ಉಳಿದ ನಮಗಾಗಿ ಧರ್ಮದಲ್ಲಿ ಯಾವುದೇ ಕಾನೂನು ನಿರ್ಮಿಸಲು ಹಕ್ಕುಳ್ಳವನು ಆಗಿರುವದಿಲ್ಲ.

"ನಿಮ್ಮ ಆಯ್ಕೆಯ ಸಭೆಗೆ ಸೇರಿಕೊಳ್ಳಿರಿ" ಎಂದು ಪ್ರಸಂಗಿಗಳು ಕೆಲವು ಸಲ ಮಾರ್ಪಾಟು ಹೊಂದಿದವರಿಗೆ ಪ್ರೋತ್ಸಾಹಿಸುವರು. ಹಾಗೆ ಮಾಡಬೇಕೆಂದು ಅವರ ಅರ್ಥವಲ್ಲದಿದ್ದರೂ ಅವರು ನಿಜವಾಗಿಯೂ ಅತ್ಯುನ್ನತದಲ್ಲಿರುವ ತಂದೆಯನ್ನು ಸಿಂಹಾಸನದಿಂದ ಕೆಳಗಿಳಿಸುವರಾಗಿದ್ದಾರೆ. "ಪರಲೋಕದಲ್ಲಿ" ಎಂದು ಹೇಳುವ ಶಿಷ್ಯರ ಪ್ರಾರ್ಥನೆಯ ಆ ಭಾಗವನ್ನು ವ್ಯರ್ಥವಾಗಿ ಹೇಳುತ್ತಾರೆ. ಮಾರ್ಪಟ್ಟವರು ಪ್ರವೇಶಿಸುವ ಸಭೆಯನ್ನು ದೇವರು ಆಯ್ದುಕೊಂಡಿರುವದಿಲ್ಲವೋ? ಆಗ ಉದ್ದೇಶವಿಲ್ಲದೇ, ಅಂಥ ಪ್ರಸಂಗಿಗಳು ಪಾಪಿ ಮನುಷ್ಯನನ್ನು ಮೇಲಕ್ಕೆತ್ತಿ ಹಿಡಿಯುತ್ತಾರೆ ಹಾಗೂ ರಕ್ಷಿಸಬಲ್ಲಾತನನ್ನು ಕಡೆಗಣಿಸುತ್ತಾರೆ.

ಮಾರ್ಪಾಟು ಹೊಂದಲಿರುವವರಿಗೆ "ತಮ್ಮ ಮನಸ್ಸಿಗೆ ಬಂದ" ಬಾಪ್ತಿಸ್ಮವನ್ನು - ಚಿಮುಕಿಸುವಿಕೆಯನ್ನು, ಸುರಿಯುವದನ್ನು, ಮುಳುಗೇಳಿಸುವಿಕೆಯನ್ನು - ಆಯ್ಕೆ ಮಾಡಿಕೊಳ್ಳ ಬೇಕೆಂದು ಹೇಳಲ್ಪಡುವಾಗ ಒಂದಕ್ಕಿಂತ ಹೆಚ್ಚು ತಪ್ಪುಗಳು ಮಾಡಲ್ಪಡುತ್ತಾರೆ. ಅತಿಯಾದ ಮೂಲ ತಪ್ಪು ಬಾಪ್ತಿಸ್ಮವು ಏನಾಗಿದೆಯೆಂಬುದನ್ನು ತಪ್ಪಾಗಿ ಅರ್ಥ ಮಾಡಿಕೊಂಡಿರುವಂಥದ್ದು. ಮನುಷ್ಯನು ಹೇಗೆ ಬಾಪ್ತಿಸ್ಮ ಹೊಂದಿದರೂ ಅದು ಭಿನ್ನತೆಯಾಗುವದಿಲ್ಲ ಎಂದು ಯೋಚಿಸುವುದು. ಬಾಪ್ತಿಸ್ಮ "ಹೇಗೆ" ಎಂಬುದು, ಮೆನ್ನೋನೈಟರು ಮಾಡುವಂತೆ, ಅಭ್ಯರ್ಥಿಯನ್ನು ಮುಳುಗಿಸುವವರೆಗೆ ಮುಂದೆ ಬಾಗಿಸುವುದು ಇಲ್ಲವೇ ಅನೇಕರು ಮಾಡುವಂತೆ, ಹಿಂದಕ್ಕೆ ಬಾಗಿಸುವುದು ಎಂದು ಯೋಚಿಸದಿದ್ದರೆ, ಅದು ತಪ್ಪಾಗಿ ಕರೆಯಲ್ಪಟ್ಟದ್ದಾಗಿರುತ್ತದೆ.

ಥೊಮಸ್ ಕ್ಯಾಂಬೆಲ್ ಅವರು ಬಾಪ್ತಿಸ್ಮ ಮಾಡಿಸುತ್ತಿದ್ದಾಗ, ರೊಬರ್ಟಸನ್ ಅವರ ಪ್ರಕಾರ, "ಕೊಳದ ದಂಡೆಯ ಮೇಲೆ ಚಾಚಿದ ಬೊಡ್ಡೆಯ ಮೇಲೆ ನಿಂತುಕೊಂಡು ಅವರ (ಅಭ್ಯರ್ಥಿಗಳ) ತಲೆಗಳನ್ನು ನೀರಿನ ಸಮಾಧಿಯಲ್ಲಿ ಹೂಣಲ್ಪಡುವವರೆಗೆ ಬಾಗಿಸಿದರು." ಎನ್. ಬಿ. ಹಾರ್ಡೆಮಾನ್ ಅವರು, ಯಥಾರ್ಥವಾಗಿ ಮಾನಸಾಂತರ ಪಟ್ಟವನೊಂದಿಗೆ ನಿಂತಿರುವಾಗ ಅವನು ಕಡಲ ಚಾಚು ಹಳ್ಳದಲ್ಲಿ (creek) "ನಾನೇಕೆ ಕುಳಿತು ಕೊಳ್ಳ ಬಾರದು?" ಎಂದು ಕೇಳಿದನು. ಸೆರೆಮನೆಯ ಯಜಮಾನನು "ಕೂಡಲೇ" (straightway)(ಅಪೊಸ್ತಲರ ಕೃತ್ಯ 16:33; KJV) ಬಾಪ್ತಿಸ್ಮ ಮಾಡಿಸಿಕೊಂಡದ್ದರಿಂದ

ಅಭ್ಯರ್ಥಿಯನ್ನು ನೇರವಾಗಿ ಕೆಳಗೆ ದೊಬ್ಬ ಬೇಕೆಂದು ಒತ್ತಾಯಿಸಿದ ಪ್ರಸಂಗಿಯ ಬಗ್ಗೆ ಗಸ್ ನಿಕೊಲ್ಸ್ ಅವರು ಹೇಳಿದ್ದಾರೆ. ಈ ಉದಾಹರಣೆಗಳು ಬಾಪ್ತಿಸ್ಮದ "ವಿಧಾನಗಳನ್ನು" ಪ್ರತಿನಿಧಿಕರಿಸದಿದ್ದರೆ ಬೇರೆ ಯಾವುದೂ ಇರುವದಿಲ್ಲ. ಮುಳು ಗೇಳಿಸುವಿಕೆಯನ್ನು ದೇವರು ಆಜ್ಞಾಪಿಸಿದನು.

"ನಿಮ್ಮ ಆಯ್ಕೆಯ" ಬಾಪ್ತಿಸ್ಮಕ್ಕೆ ಜನರಿಗೆ ಸಮ್ಮತಿಸಿದ ತಪ್ಪಾದ ಪ್ರಕಟನೆಯ ಬಗ್ಗೆ ನಾವು ಇಲ್ಲಿ ಆಸಕ್ತರಾಗಿದ್ದೇವೆ. ನಿಮ್ಮ ಬಾಪ್ತಿಸ್ಮ "ಹೇಗೆ" ಎಂಬುದರ ಬಗ್ಗೆ ದೇವರಿಗೆ ಆಯ್ಕೆ ಇರುವದಿಲ್ಲ. ನಿಜವಾಗಿ, ಪಾಪಿ ಮನುಷ್ಯನು ಕತ್ತಲೆಯಲ್ಲಿದ್ದಾನೆ ಮತ್ತು ತನ್ನ ಹೆಜ್ಜೆಗಳನ್ನು ಹೇಗೆ ಇಡಬೇಕೆಂಬುದನ್ನು ಅವನು ತಿಳಿದಿರುವದಿಲ್ಲ. ಬಾಪ್ತಿಸ್ಮವನ್ನು ಆಜ್ಞಾಪಿಸಿದಾತನು ಪಾಪವಿಲ್ಲದೇ ಜೀವಿಸಿದನು ಹಾಗೂ ಯಾವ ಮಾನವನೂ ತಲುಪದ ಬೆಳಕಿನಲ್ಲಿ ಆತನು ಈಗ ವಾಸಿಸುತ್ತಿರುವದರಿಂದ, ಬಾಪ್ತಿಸ್ಮದ "ಹೇಗೆ" ಎಂಬುದನ್ನು ತೀರ್ಮಾನಿಸುವ ಪ್ರಯತ್ನ ಮಾಡುವಾಗ ಮನುಷ್ಯನು ತನ್ನ ಸ್ಥಳದಲ್ಲಿ ಇರುವುದಿಲ್ಲ.

ಆದುದರಿಂದ, "ಪರಲೋಕದಲ್ಲಿ ಇರುವಾತನು" ಎಂದು ನಾನು ಪ್ರಾರ್ಥಿಸುವಾಗ, ದೇವರು ಸಂಪೂರ್ಣ ನಿಯಂತ್ರಣದಲ್ಲಿ ಇರುವನೆಂದು ಹೇಳುತ್ತೇನೆ. ಅಂಥ ಮನೋ ಭಾವನೆಯೊಂದಿಗೆ ಪ್ರಾರ್ಥಿಸುವದರಿಂದ, ನಾನು ದೇವರ ಅತೀ ಶ್ರೇಷ್ಠ ಅಧಿಕಾರವನ್ನು ಹಾಗೂ ಒಂದೇ ಬುದ್ಧಿವಂತ ಸಾರ್ವಭೌಮತೆಯನ್ನು ಒಪ್ಪಿಕೊಳ್ಳುತ್ತೇನೆ. ಅವುಗಳ ಅರಿಕೆಯನ್ನೂ ಮಾಡುತ್ತೇನೆ. ಹಾಗೂ ದೇವರು ಪರಲೋಕದಲ್ಲಿ ಇರುವದರಿಂದ ಆತನ ಸ್ತೋತ್ರ ಮಾಡುತ್ತೇನೆ. ಅರಸ ಯೆಹೋಷಾಫಾಟನ ಸ್ತುತಿಯನ್ನು ಆಲಿಸಿರಿ:

> ಯೆಹೋವನೇ, ನಮ್ಮ ಪಿತೃಗಳ ದೇವರೇ, ಪರಲೋಕದಲ್ಲಿ ದೇವರಾಗಿರುವಾತನು ನೀನಲ್ಲವೋ? ನೀನು ಜನಾಂಗಗಳ ಎಲ್ಲಾ ರಾಜ್ಯಗಳನ್ನು ಆಳುವವನಾಗಿರುತ್ತೀ, ನಿನ್ನ ಹಸ್ತದಲ್ಲಿ ಬಲಪರಾಕ್ರಮಗಳು ಇರುತ್ತವೆ. ನಿನ್ನ ಎದುರಿನಲ್ಲಿ ಯಾರೂ ನಿಲ್ಲಲಾರರು (2 ಪೂರ್ವಕಾಲವೃತ್ತಾಂತ 20:6).

ಯಾವುದೇ ಮಾತನ್ನು ಜಾಗರೂಕತೆಯಿಂದ ಲೆಕ್ಕಿಸುವದಕ್ಕೆ ಅರಸ ಸೊಲೊಮೋ ನನು ಬುದ್ಧಿವಾದ ಹೇಳಿದ ಕಾರಣಗಳಲ್ಲಿ ಇದು ಒಂದಾಗಿದೆ: "ದೇವರು ಪರಲೋಕ ದಲ್ಲಿದ್ದಾನೆ, ನೀನು ಭೂಲೋಕದಲ್ಲಿ ಇದ್ದೀಣಿ ಆದಕಾರಣ ನಿನ್ನ ಮಾತುಗಳು ಕೊಂಚವಾ ಗಿರಲಿ" (ಪ್ರಸಂಗಿ 5:2).

ಪರಲೋಕದಲ್ಲಿ, ಭೂಲೋಕದಲ್ಲಿ, ಭೂಲೋಕದ ಕೆಳಗೆ, ನೆನ್ನೆ, ಈ ಹೊತ್ತು ಹಾಗೂ ನಾಳೆ ಆತನ ಆಳಿಕೆಯನ್ನು ಒಪ್ಪಿಕೊಳ್ಳುವದರೊಂದಿಗೆ ಮಹೋನ್ನತನ ಇನ್ನೊಂದು ಮಹಾಗುಣಲಕ್ಷಣವು "ಪರಲೋಕದಲ್ಲಿರುವಾತನು" ಎಂದು ಘೋಷಿಸುತ್ತೇನೆ. ಅಮೇರಿ ಕಾದಲ್ಲಿ ಇಲ್ಲವೇ ಚೀನಾದಲ್ಲಿ ಆತನು ಹಗಲೂ ರಾತ್ರಿಯೂ ಗಮನಿಸುವವನೂ ಆತನ ಕಣ್ಣುಗಳು ನೋಡುತ್ತವೆಯೆಂದೂ ಆತನ ಕಣ್ಣುಗಳು ಮಾನವರನ್ನು ಪರೀಕ್ಷಿಸುತ್ತವೆಂದೂ ನಾನು ಹೇಳುತ್ತಿರುವೆನು (ಕೀರ್ತನೆ 11:4). ಅದನ್ನು ಆತನು ಹೇಗೆ ಮಾಡುವನೆಂಬುದನ್ನು ನಾನು ಅರ್ಥಮಾಡಿಕೊಳ್ಳಲಾರೆನುಣಿ ಅಂಥ ಜ್ಞಾನವು ನನಗೆ ಅತಿಯಾದದ್ದಾಗಿದೆ. ಅದು ಬಹಳ ಉನ್ನತದಲ್ಲಿದೆಣಿ ಅದನ್ನು ತಲುಪಲಾರೆನು (ಕೀರ್ತನೆ 139:1-16). ನಾನು ಕುಳಿತು ಕೊಳ್ಳುವದನ್ನೂ, ಮಲಗುವದನ್ನೂ, ನಡೆದಾಡುವದನ್ನೂ ದೇವರು ತಿಳಿದಿರುತ್ತಾನೆ. ದೂರದಿಂದಲೇ ಆತನು ನನ್ನ ಯೋಚನೆಯನ್ನು ಬಲ್ಲವನಾಗಿದ್ದಾನೆ, ನಾನು ಹುಟ್ಟುವದಕ್ಕಿಂತ ಮುಂಚಿತವಾಗಿಯೇ ನನಗಾಗಿ ಆತನ ಯೋಜನೆಗಳು ಮಾಡಲ್ಪಟ್ಟಿವೆ: "ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವುಣಿ

ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು. ಅವುಗಳಲ್ಲಿ ಒಂದೂ ಇಲ್ಲದಿದ್ದಾಗ ಅವುಗಳು ರೂಪಿಸಲ್ಪಟ್ಟವು" (ಕೀರ್ತನೆ 139:16).

ಎಲ್ಲವನ್ನು ನೋಡುವ ಕಣ್ಣು ಕಾಯೀನನು ಹೊಲದಲ್ಲಿ ಎದ್ದುಕೊಂಡು ನಿರ್ದೋಷಿಯನ್ನು ಕೊಲೆ ಮಾಡುವದನ್ನು ತಿಳಿದಿರುತ್ತದೆ. ಒಬ್ಬ ಆಕಾನನು ಬಬಿಲೋನಿನ ಒಳ್ಳೇ ನಿಲುವಂಗಿಯನ್ನು, ಬೆಳ್ಳಿ ಶೆಕೆಲುಗಳನ್ನು ಹಾಗೂ ಬಂಗಾರವನ್ನು ಕದ್ದುಕೊಳ್ಳುವದನ್ನು ಆತನು ನೋಡುತ್ತಾನೆ. ಪರಲೋಕದಲ್ಲಿ ಯಾವಾಗಲೂ ಇರುವಾತನು ಹಾಗೂ ಎಲ್ಲವನ್ನೂ ತಿಳಿದಾತನು, ಮುದುಕನೂ ಕುರುಡನೂ ಆದ ಪ್ರವಾದಿಯು ಮೋಸಗಾರಳನ್ನು ವಂದಿಸಲು ಶಕ್ತನನ್ನಾಗಿ ಮಾಡಿದನು: "ಯೆರೊಬ್ಬಾಮನ ಹೆಂಡತಿಯೇ ಬಾ, ಯಾಕೆ ನಿನ್ನನ್ನು ಅನ್ಯಳೆಂದು ತೋರ್ಪಡಿಸಿ ಕೊಳ್ಳುತ್ತೀ?" (1 ಅರಸು 14:6). ಕಳ್ಳನಾದ ಗೇಹಾಜಿಯು ಬಟ್ಟೆಯನ್ನೂ ಬೆಳ್ಳಿಯನ್ನೂ ಪಡೆದು ಕೊಳ್ಳಲು ಸುಳ್ಳು ಕತೆ ಕಟ್ಟಿದಾಗ, ಪರಲೋಕದಿಂದ ನೋಡುವಾತನು ಯಾವಾಗಲೂ ಆ ಅಪನಂಬಿಗಸ್ತ ಸೇವಕನನ್ನು ಗಮನಿಸುವಂತೆ ಪ್ರವಾದಿ ಎಲೀಷನನ್ನು ಬಲಪಡಿಸಿದನು: "ನನ್ನ ಹೃದಯವು ನಿನ್ನೊಂದಿಗೆ ಹೋಗ ಅಲ್ಲವೋ ... ?" (2 ಅರಸು 5:26).

ಎಲ್ಲವನ್ನೂ ನೋಡುವ ಕಣ್ಣುಗಳ ನಿಮಿತ್ತವಾಗಿ ದುಷ್ಟ ಜನರು ಭಯಪಟ್ಟು ನಡುಗುವಾಗ, ಒಳ್ಳೇ ಜನರು ಆಳವಾಗಿ ಆದರಿಸಲ್ಪಡುವರು. ದುಷ್ಟತ್ವವನ್ನು ನೋಡುವ ಅದೇ ಕಣ್ಣು, ಪ್ರತಿಯೊಂದು ಒಳ್ಳೇ ಕಾರ್ಯವನ್ನು ನೋಡುವುದು. ದೇವರು ನೀತಿವಂತನುಣಿ ನಂಬಿಕೆಯ ನಿಮ್ಮ ಕಾರ್ಯವನ್ನು, ಕೊರತೆಯಲ್ಲಿ ಇರುವವರಿಗೆ ನೀವು ಮಾಡುವ ಪ್ರೀತಿಯ ಕಾರ್ಯವನ್ನು ಆತನು ಮರೆಯುವದಿಲ್ಲ. ಮಗುವಿಗೆ ವಿರೋಧವಾಗಿ ಮಾಡುವ ಪ್ರತಿಯೊಂದು ಅಪರಾಧವನ್ನು ಆತನ ಕಣ್ಣುಗಳು ನೋಡುವವಲ್ಲದೇ, ಆತನ ಚಿಕ್ಕವರಲ್ಲಿ ಒಬ್ಬನ ಬಗೆಗಿರುವ ದಯೆಯ ಕಾರ್ಯವನ್ನೂ ಸಹ ನೋಡುವವು.

## ಪರಲೋಕದಿಂದ ದೇವರ ಅವಲೋಕನ

ಪರಲೋಕದಲ್ಲಿ ಸಿಂಹಾಸನಾಸೀನನಾದಾತನಿಂದ ಗಮನಿಸಲ್ಪಡಲು ನೀವು ಮಹಾ ಕಾರ್ಯಗಳನ್ನು ಮಾಡಲು ಶಕ್ತರಾಗಬೇಕಾಗಿಲ್ಲ ಎಂಬ ವಿಚಾರವು ಅಮುಲ್ಯವಾದದ್ದಾಗಿದೆ. ನೀವು ಕೊಡಬಹುದಾದದ್ದು ಒಂದು ಲೋಟ ತಣ್ಣೀರು ಆಗಿದ್ದರೂ, ಅದನ್ನು ಕೊಡಲು ನಿಮ್ಮ ಹೃದಯ ಮುಂದಾಗಲಿ. ನೀವು ನಿಮ್ಮ ಬಹುಮಾನವನ್ನು ಕಳೆದು ಕೊಳ್ಳುವದಿಲ್ಲ. ಒಂದು ಅಗತ್ಯತೆಯುಳ್ಳ ಕುಟುಂಬದ ಬಾಗಿಲಿನ ಬಳಿಯಲ್ಲಿ ಒಂದು ಹಿಟ್ಟಿನ ಚೀಲವನ್ನು ಇಡುವದನ್ನು ಯಾವ ಭೂಲೋಕದ ಕಣ್ಣು ನಿನ್ನನ್ನು ನೋಡಲಿಕ್ಕಿಲ್ಲ. ಆದರೆ ರಹಸ್ಯದಲ್ಲಿ ನೋಡುವ ನಿನ್ನ ತಂದೆಯು ಬಡ್ಡಿ ಸಹಿತ ನಿನಗೆ ಹಿಂದಿರುಗಿ ಕೊಡುವನು.

ನೀವು ನಿಮ್ಮ ನೆರೆಯವರೊಂದಿಗೆ ಪರಲೋಕದಿಂದ ಬಂದ ಸುವಾರ್ತೆಯ ಬಗ್ಗೆ ಮಾತನಾಡಿದ ಸಮಯವಿರಬಹುದು. ಹಾಗೂ ಶುದ್ಧೀಕರಿಸುವ ರಕ್ತದ ಬುಗ್ಗೆಯಲ್ಲಿ ತೊಳೆದು ಕೊಳ್ಳಲು ಅವರನ್ನು ನಡಿಸಿರಬಹುದು. ಒಂದು ವೇಳೆ ನೀವು ಪ್ರಸಂಗಿಯಿಂದ ಇಲ್ಲವೇ ಬೇರೆ ಯಾರಿಂದಲೂ ಮೆಚ್ಚಿಕೆಯನ್ನು ಹೊಂದಿಕೊಳ್ಳದೇ ಇರಬಹುದು. ಆದರೆ ನೀವು ಅಂಥ ಪುರಸ್ಕಾರಕ್ಕಾಗಿ ಕಾರ್ಯ ಮಾಡಲಿಲ್ಲ. ನೀವು ನಮ್ಮನ್ನು ನೀತಿವಂತರೆಂದು ಎಣಿಸಲ್ಪಟ್ಟದ್ದಕ್ಕಾಗಿಯೂ ಪಾಪದಿಂದ ಬಿಡುಗಡೆ ಹೊಂದಿದ್ದಕ್ಕಾಗೆಯೂ ಯೇಸುವಿನ ಬಗ್ಗೆ ನಿಮ್ಮ ಮೆಚ್ಚಿಕೆಯನ್ನು ನೀವು ಆಚರಿಸುತ್ತಿರ ಬಹುದು. ನಿಮ್ಮ ನೆರೆಯವರಿಗೂ

ಅಂಥ ಮಹಿಮೆಯುಳ್ಳ ಹಾಗೂ ಎಂದೂ ತೀರದ ಅನುಭವಗಳಿಗಾಗಿ ನೀವು ಬಯಸುತ್ತಿರಬಹುದು. ಎಲ್ಲವನ್ನೂ ನೋಡುವ ಕಣ್ಣು, ನಿಮ್ಮ ಮೃದುವಾದ ಸಲಿಪಡಿಸುವಿಕೆಯನ್ನು, ಮನವೊಲಿಸುವಂಥ ವಿವರಣೆಯನ್ನು ನೋಡಿರುವನುಣಿ ಒಬ್ಬ ಪಾಪಿಯನ್ನು ಪರಿವರ್ತಿಸಲು ನೀವು ಪ್ರಯಾಸಪಡುವದಕ್ಕೆ ಅದು ನಿಮ್ಮ ಹೃದಯವನ್ನು ತುಂಬಿಕೊಂಡಿತ್ತು. ನೀವು ಅಂತರಿಕ್ಷದಲ್ಲಿಯ ಪ್ರಕಾಶಮಾನವಾಗಿ ಬೆಳಗಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಯಾಕಂದರೆ "ನೀತಿಗೆ ಅನೇಕರನ್ನು ನಡಿಸುವವನು ನಿತ್ಯವಾಗಿ ನಕ್ಷತ್ರಗಳಂತೆ ಹೊಳೆಯುವನು" ಎಂದು ಆತನು ವಾಗ್ದಾನ ಮಾಡಿದ್ದಾನೆ (ದಾನಿಯೇಲ 12:3).

ದೇವರು ನಮ್ಮನ್ನು ಗಮನಿಸುತ್ತಿರುವನು ಎಂಬ ಭಾವನೆಯು ಎಷ್ಟು ಆದರಿಸುವಂಥದ್ದೂ ಬಲಪಡಿಸುವಂಥದ್ದೂ ಆಗಿರುತ್ತದೆಯಲ್ಲವೇ! ಮನುಷ್ಯನು ಏನೇ ಮಾಡಿದರೂ ಇಲ್ಲವೇ ನಿಮಗೆ ಏನೇ ಹೇಳಿದರೂ, ಗಮನಿಸುತ್ತಿರುವ ತಂದೆಗೆ ನಟನೆಯಿಲ್ಲದ ಭಕ್ತಿಯಿಂದ ನೀವು ಮಹಾ ವಾಗ್ದಾನ ಹಕ್ಕುಗಳನ್ನು ಕೇಳಬಹುದು: "ಯಾರ ಹೃದಯವು ಸಂಪೂರ್ಣವಾಗಿ ತನ್ನದಾಗಿರುವುದೋ ಅಂಥವರಿಗೆ ತಾನು ಬಲವಾಗಿ ಬೆಂಬಲಕೊಡಲು ಕರ್ತನ ಕಣ್ಣುಗಳು ಭೂಲೋಕದಲ್ಲೆಲ್ಲಾ ಅತ್ತಿತ್ತ ಚಲಿಸುತ್ತಿರುವವು" (2 ಪೂರ್ವಕಾಲವೃತ್ತಾಂತ 16:9).

## ಪರಲೋಕವು ಸಮೀಪದಲ್ಲಿರುವುದು

ಕರ್ತನು ಉನ್ನತದಲ್ಲಿ ಹಾಗೂ ಪರಲೋಕದಲ್ಲಿ ಮೇಲಕ್ಕೆತ್ತಲ್ಪಟ್ಟಿರುವ ಸಂಗತಿಯು ನಮ್ಮ ದೇವರನ್ನು ದೂರದಲ್ಲಿರುವಾತನನ್ನಾಗಿ ಮಾಡುವದಿಲ್ಲ. ನಿಜವಾಗಿಯೂ ಆತನು ಎಲ್ಲಾದರ ಮೇಲಿರುವ, ಆದರೆ ಆತನು ಎಲ್ಲವುಗಳ ಮುಖಾಂತರವಾಗಿರುವ, ಹಾಗೂ ಎಲ್ಲದರಲ್ಲಿ ಇರುವಾತನು (ಎಫೆಸ 4:6). ಆತನು ಪರಲೋಕದಲ್ಲಿ ಆಳುವದಷ್ಟೇ ಅಲ್ಲ, ಕ್ರಿಸ್ತನವರಾಗಿರುವವರ ಹೃದಯಗಳಲ್ಲಿಯೂ ಆತನು ವಾಸಿಸುವನು, ನೀವು ಸುವಾರ್ತೆಗೆ ವಿಧೇಯರಾಗುವಾಗ ಮೇಲಿಣಿಂದ ಅತಿಥಿಗಳು ಬರುವರು. ನೀವು ಬಾಪ್ತಿಸ್ಮ ಹೊಂದುವಾಗ, ದೇವರು ಬಹುಮಾನದಂತೆ ಮತ್ತು ನಿಮ್ಮ ನಿತ್ಯವಿಮೋಚನೆಯು ಎಂದಿಗೂ ಇರುವ ಭರವಸೆಯಂತೆ ಆತ್ಮನನ್ನು ಕಳುಹಿಸುವನು (ಅಪೊಸ್ತಲರ ಕೃತ್ಯ 2:38ಣಿ 5:32ಣಿ ಗಲಾತ್ಯ 4:6ಣಿ ಎಫೆಸ 1:13, 14). ಪರಿಶುದ್ಧಾತ್ಮನಲ್ಲದೇ (1 ಕೊರಿಂಥ 6:19), ಇನ್ನೂ ಇಬ್ಬರು ಅಮೂಲ್ಯವಾದ ಸಂದರ್ಶಕರಿರುವರು: "ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನೊಂದಿಗೆ ನಿವಾಸ ಮಾಡಿಕೊಳ್ಳುವೆವು" (ಯೋಹಾನ 14:23).

ತನ್ನ ಆಲಯದಲ್ಲಿ ಕುಳಿತು ಕೊಂಡ, ಪರಲೋಕಗಳ ದೇವರು (ಕೀರ್ತನೆ 11:4) ಅದೇ ಸಮಯದಲ್ಲಿ ನಿಮ್ಮಲ್ಲಿ ಹೇಗೆ ವಾಸಿಸುವನು ಎಂದು ನೀವು ನನಗೆ ಪ್ರಶ್ನಿಸಿದರೆ, "ನನಗೆ ತಿಳಿದಿರುವದಿಲ್ಲ. ಆತನು ಹಾಗೆ ಮಾಡುತ್ತಾನೆಂದು ಮಾತ್ರ ಬಲ್ಲೆನು" ಎಂದು ಮಾತ್ರವೇ ಹೇಳಬಲ್ಲೆನು. "ದೇವರು ನಂಬಿಗಸ್ತನು" (2 ತಿಮೊಥೆ 2:13), ಹಾಗೂ ಪರಿಶುದ್ಧ ಬರಹಗಳನ್ನು ಮುರಿಯಲಿಕ್ಕಾಗುವದಿಲ್ಲ (ಯೋಹಾನ 10:35). ಕ್ರಿಸ್ತನು ಪರಲೋಕದಲ್ಲಿ ತಂದೆಯ ಬಲಗಡೆಯಲ್ಲಿ ಇರುವನು (1 ಪೇತ್ರ 3:22), ಆದರೆ ಪ್ರತೀ ಕರ್ತನ ದಿನದಂದು ಆತನು ಭೂಲೋಕದಲ್ಲಿ ತನ್ನ ಭಕ್ತರೊಂದಿಗೆ ಅನ್ಯೋನ್ಯತೆಯಲ್ಲಿ ಪಾಲು ತೆಗೆದು ಕೊಳ್ಳು ವನು (ಮತ್ತಾಯ 26:29). ಅದೇ ಸಮಯದಲ್ಲಿ ಉನ್ನತದಲ್ಲಿ ಮಹಿಮೆಯ ಮಧ್ಯದಲ್ಲಿ ಆತನಿರುವನು ಮತ್ತು ಆತನ ಹೆಸರಿನಲ್ಲಿ ಇಬ್ಬರಾಗಲೀ

ಮೂವರಾಗಲೀ ಕೂಡಿಬರುವ ದೀನನ ಗುಡಿಸಲಿನಲ್ಲಿಯೂ ಇರಬಹುದು (ಮತ್ತಾಯ 18:20). ತಂದೆಯ ಉನ್ನತ ಮಟ್ಟಕ್ಕೇರಿಸುವಿಕೆಯು ಹಾಗೂ ದೇವಭಕ್ತರೊಂದಿಗೆ ಆತನ ಪ್ರಸನ್ನತೆಯ ಸಾನ್ನಿಧ್ಯವು ವಿವರಿಸಲು ಅಸಾಧ್ಯವಾದದ್ದಾಗಿದೆ. ಆದರೆ ಬಹಳ ಕಾಲದಿಂದ ತಿಳಿಯಲ್ಪಟ್ಟ ಮತ್ತು ಮೆಚ್ಚಿಕೊಳ್ಳಲ್ಪಟ್ಟ ಭರವಸೆ ಕೊಡುವ ಸಂಗತಿಗಳಾಗಿವೆ. ಯೆಶಾಯನು ಹೀಗೆ ಬರೆದಿದ್ದಾನೆ,

> ಪರಿಶುದ್ಧನು ಎಂಬ ಹೆಸರುಳ್ಳಾತನು, ಉನ್ನತದಲ್ಲಿ ಮಹಿಮೆಯುಳ್ಳಾತನಾಗಿ ಸದಾಕಾಲ ವಾಸಿಸುವಾತನು ಹೀಗೆ ಹೇಳುತ್ತಾನೆ, "ಉನ್ನತದಲ್ಲಿ ಮತ್ತು ಪವಿತ್ರ ಸ್ಥಳದಲ್ಲಿ ನಾನು ವಾಸಿಸುತ್ತೇನೆ ಹಾಗೂ ದೀನನ ಆತ್ಮವನ್ನು ಪುನರುಜ್ಜೀವಿಸಲು ಮತ್ತು ಪಶ್ಚಾತ್ತಾಪ ಪಟ್ಟ ಹೃದಯದವನನ್ನು ಪುನರುಜ್ಜೀವಿಸಲು ಪಶ್ಚಾತ್ತಾಪ ಪಟ್ಟವರೊಂದಿಗೆ ದೀನರೊಂದಿಗೆ ಸಹ ವಾಸಿಸುತ್ತೇನೆ" (ಯೆಶಾಯ 57:15).

ನೀವು ಪ್ರಾರ್ಥಿಸುವಾಗ, ಪರಲೋಕದಲ್ಲಿರುವ ನಿಮ್ಮ ತಂದೆಗೆ ಪ್ರಾರ್ಥಿಸಿರಿ.